**ದಿನಾಂಕಃ 17-08-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವೈ.ಹೆಚ್.ಕೆ. ವಕೀಲರಿಂದಃ**

ಹಾಲಮ್ಮನ ಗಂಡನ ಹೆಸರು ಕರಿಯಪ್ಪ ಎಂದರೆ ನಿಜ. 1989 ರಲ್ಲಿ ಕರಿಯಪ್ಪ ಮೃತಪಟ್ಟಿರುತ್ತಾರೆ. ಅವರಿಗೆ ಹನುಮವ್ವ ಮತ್ತು ದ್ಯಾಮವ್ವ ಎಂದು ಇಬ್ಬರು ಹೆಣ್ಣು ಮಕ್ಕಳು. ಹನುಮವ್ವಗೆ 4 ಜನ ಮಕ್ಕಳು. ದ್ಯಾಮವ್ವಗೆ 5 ಜನ ಮಕ್ಕಳು. ದ್ಯಾಮವ್ವನ ಮೊದಲನೇ ಮಗ ಮೃತಪಟ್ಟಿರುತ್ತಾನೆ. ನನ್ನ ಸಹೋದರ ಸಹೋದರಿಯರಲ್ಲಿ ನಾನೇ ವಿದ್ಯಾವಂತ. ನಾನು ಎಂ.ಎ., ಬಿ.ಎಡ್. ಮಾಡಿರುತ್ತೇನೆ. ನನ್ನ ಸಹೋದರರು ಕದರಮಂಡಲಗಿಯಲ್ಲಿ ವ್ಯವಸಾಯ ಮತ್ತು ಕುರಿಯನ್ನು ಕಾಯುತ್ತಾರೆ ಎಂದರೆ ನಿಜ. ನನ್ನ ಸಹೋದರರು ಓದಲು-ಬರೆಯಲು ಬರುವುದಿಲ್ಲ, ಸಹಿಯೂ ಸಹ ಮಾಡುವುದಿಲ್ಲ ಹೆಬ್ಬೆಟ್ಟು ಹಾಕುತ್ತಾರೆ ಎಂದರೆ ನಿಜ. ನಾನು ವಿದ್ಯಾವಂತನಾಗಿದ್ದರಿಂದ ನನ್ನ ಸಹೋದರರು ಎಲ್ಲಾ ವ್ಯವಹಾರಕ್ಕೂ ನನ್ನನ್ನೇ ಅವಲಂಬಿಸಿದ್ದರು ಎಂದರೆ ಸರಿಯಲ್ಲ. ಮನೆಯ ಎಲ್ಲಾ ವ್ಯವಹಾರವನ್ನು ನನ್ನ ಮುಖಾಂತರ ಮಾಡಿಸುತ್ತಿದ್ದರು ಎಂದರೆ ಸರಿಯಲ್ಲ.

ನನ್ನ ಅಜ್ಜ ಕರಿಯಪ್ಪನ ಹೆಸರಿಗೆ ಸರ್ವೆ ನಂ. 310/3ಕ 03 ಎಕರೆ 00 ಗುಂಟೆ ಜಮೀನು ಇತ್ತು ಎಂದರೆ ನಿಜ. ಈ ಆಸ್ತಿ ಕರಿಯಪ್ಪಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿ ಎಂದರೆ ಸರಿಯಲ್ಲ. ಕರಿಯಪ್ಪ 1957 ರಲ್ಲಿ ದಾಳೇರ ಎಂಬುವವರಿಂದ ಖರೀದಿ ಮಾಡಿದ್ದರು. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಿಯಪ್ಪ ಮತ್ತು ಹಾಲವ್ವ ಕರಿಯಪ್ಪ ಜೀವಿತಾವಧಿಯಲ್ಲಿ ಜೋತೆಯಲ್ಲಿಯೇ ವಾಸವಾಗಿದ್ದರು ಎಂದರೆ ನಿಜ. ಅವರೊಂದಿಗೆ ನಾನು ಸಹ ಇದ್ದೆ. ಕಂಡೆಪ್ಪ ಮತ್ತು ದುರ್ಗಪ್ಪ ನನ್ನ ತಂದೆಯೊಂದಿಗೆ ಬೇರೆ ಮನೆಯಲ್ಲಿದ್ದರು. ಎಲ್ಲರೂ ಒಂದೇ ಮನೆಯಲ್ಲಿ ಕರಿಯಪ್ಪ ಮತ್ತು ಹಾಲವ್ವನೊಂದಿಗೆ ವಾಸವಾಗಿದ್ದೆವು ಎಂದರೆ ಸರಿಯಲ್ಲ. ಈ ವಿಷಯವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕರಿಯಪ್ಪ ತೀರಿಕೊಂಡ ನಂತರ ಸರ್ವೆ ನಂ. 310/3 ಕ 03 ಎಕರೆ ಆಸ್ತಿ ಹಾಲಮ್ಮನ ಹೆಸರಿಗೆ ಪೌತಿ ವಾರಸು ಖಾತೆ ಬದಲಾವಣೆ ಆಯಿತು ಎಂದರೆ ನಿಜ. ಸದರಿ ಆಸ್ತಿಯಲ್ಲಿ ನನ್ನ ಅಜ್ಜ-ಅಜ್ಜಿ, ತಂದೆ-ತಾಯಿ ಕೂಡಿ ಉಳುಮೆ ಮಾಡುತ್ತಿದ್ದೆವು ಎಂದರೆ ಸರಿಯಲ್ಲ, ನನ್ನ ಅಜ್ಜ-ಅಜ್ಜಿ ನಾನು ಹಾಗೂ ಹನುಮಂತಪ್ಪ ಮಾತ್ರ ಸದರಿ ಆಸ್ತಿಯನ್ನು ಉಳುಮೆ ಮಾಡುತ್ತಿದ್ದೆವು. ಹಾಲವ್ವನ ಬಳಿ ಬಂಗಾರ ಇತ್ತು ಮತ್ತು ಕುರಿ ಸಾಗಾಣಿಕೆ ಮಾಡುತ್ತಿದ್ದರು. ನಾನು ಈ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಹಾಲಮ್ಮಗೆ ಬೇರೆ ಯಾವುದೇ ಆದಾಯ ಇರಲಿಲ್ಲ, ಮೇಲೆ ಹೇಳಿದ ಜಮೀನಿನಲ್ಲಿ ಎಲ್ಲ ಕುಟುಂಬ ಸದಸ್ಯರು ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ.

ಸರ್ವೆ ನಂ. 310/3 ಕ ಆಸ್ತಿಯ ಆದಾಯದಿಂದ ಕರಿಯಪ್ಪ ದಾವಾ ಆಸ್ತಿಯನ್ನು ಹಾಲಮ್ಮನ ಹೆಸರಿಗೆ ಖರೀದಿ ಮಾಡಿದರು ಎಂದರೆ ಸರಿಯಲ್ಲ. ಹಾಗೇ ಖರೀದಿ ಮಾಡಿದ್ದರೂ ಒಟ್ಟು ಕುಟುಂಬದ ನಾತೆ ಎಲ್ಲರೂ ಸ್ವಾಧೀನ, ಅನುಭವ ಹೊಂದಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಯೂ ಹಾಲವ್ವನ ವೈಯಕ್ತಿಕ ಹಾಗೂ ಸ್ವಯಾರ್ಜಿತ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯೂ ಹಾಲಮ್ಮನ ಕುಟುಂಬದ ಎಲ್ಲಾ ಸದಸ್ಯರ ಆಸ್ತಿ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರೂ ಆಸ್ತಿಯನ್ನು ಕಬಳಿಸಬೇಕು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಹಾಲವ್ವರವರು ದಿನಾಂಕಃ 02.10.2017 ರಂದು ಮೃತಪಟ್ಟರು. ಅವರು ಮೃತ ಪಡುವ ಸಮಯಕ್ಕೆ ಸುಮಾರು 65-70 ವರ್ಷ ಆಗಿರಬಹುದು. ಅವರು ಮೃತ ಪಡುವ ಸಮಯಕ್ಕೆ 98-100 ವರ್ಷ ಆಗಿರಬಹುದು ಎಂದರೆ ಸರಿಯಲ್ಲ. 1972 ರಲ್ಲಿ ದಾವಾ ಆಸ್ತಿಯನ್ನು ಹಾಲಮ್ಮನ ಹೆಸರಿಗೆ ಖರೀದಿ ಮಾಡಲಾಗಿತ್ತು. ಆಗ ಹಾಲವ್ವಗೆ 45 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಹಾಲಮ್ಮನ ವಯಸ್ಸು ನಿಖರವಾಗಿ ಹೇಳಲಾಗುವುದಿಲ್ಲ ಎಂದರೆ ಅವರು ನಮಗೆ ವಯಸ್ಸು ಹೇಳುತ್ತಿದ್ದರು ಎಂದು ಹೇಳುತ್ತಾರೆ. ಹಾಲವ್ವ ಮೃತಪಡುವ ಕಾಲಕ್ಕೆ 100 ವರ್ಷ ವಯಸ್ಸಾಗಿದ್ದರು ದಾವಾ ಆಸ್ತಿಯನ್ನು ಎತ್ತಿ ಹಾಕಬೇಕು ಎಂಬ ಉದ್ದೇಶದಿಂದ

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ದಾವೆ ಹಾಕುವ ಮೊದಲು ವಿಲ್ ನಾಮೆ ಮುಖಾಂತರ ಖಾತೆ ನನ್ನ ಹೆಸರಿಗೆ ಬದಲಾವಣೆ ಮಾಡಲು ತಹಶೀಲ್ದಾರ ಬ್ಯಾಡಗಿಯವರಿಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ನಿಜ. ಸಾಕ್ಷಿಗೆ ಈಗ ಅರ್ಜಿಯ ಪ್ರತಿಯನ್ನು ತೋರಿಸಿ ಅದನ್ನು ಒಪ್ಪಿಕೊಳ್ಳುತ್ತಾರೆ ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸದರಿ ಅರ್ಜಿಗೆ 2 ನೇ ಪ್ರತಿವಾದಿ ತಕರಾರು ಸಲ್ಲಿಸಿದರು ಎಂದರೆ ನಿಜ. ಆಗ ತಹಶೀಲ್ದಾರ ಕಚೇರಿಯಲ್ಲಿ ಆರ್.ಟಿ.ಡಿ.ಸಿ ಆರ್ 19/2018-19 ನೊಂದಾಯಿತು ಎಂದರೆ ನಿಜ. ತಕರಾರಿನಲ್ಲಿ ನಾವು ಖೊಟ್ಟಿ ವಿಲ್ ನಾಮೆ ಸೃಷ್ಟಿಸಿ ಖೊಟ್ಟಿ ಅರ್ಜಿ ಕೊಟ್ಟಿದ್ದಾರೆ ಎಂದರೆ ನಿಜ. ಅರ್ಜಿಯೊಂದಿಗೆ ಒಂದು ವಿಲ್ ನಾಮೆಯನ್ನು ಹಾಜರು ಪಡಿಸಿದ್ದೆವು ಎಂದರೆ ನಿಜ. ಸದರಿ ವಿಲ್ ನಾಮೆಯ ಪ್ರತಿಯನ್ನು ಸಾಕ್ಷಿಗೆ ತೋರಿಸಿ ಅದನ್ನು ಒಪ್ಪಿಕೊಂಡಿದ್ದರಿಂದ ನಿಡಿ-2 ಎಂದು ಗುರುತಿಸಲಾಯಿತು. ನಿಡಿ-2 ರಲ್ಲಿ ರದ್ದುಗೊಳಿಸಲಾಗಿದೆ ಎಂದು ಷರಾ ಇತ್ತು ಎಂದರೆ ನಿಜ, ಆದರೆ ನಾನು ಅದನ್ನು ನೋಡಿರುವುದಿಲ್ಲ. ನಿಡಿ-2 ರದ್ದಾಗಿದ್ದರೂ ಹೇಗಾದರೂ ಮಾಡಿ ಆಸ್ತಿ ಕಬಳಿಸಬೇಕು ಎಂಬ ಉದ್ದೇಶದಿಂದ ವಿಲ್ ಮತ್ತು ಅರ್ಜಿ ಕೊಟ್ಟಿದ್ದೆವು ಎಂದರೆ ಸರಿಯಲ್ಲ. ವಿಲ್ ರದ್ದಾಗಿದೆ ಎಂದು ಪ್ರತಿವಾದಿಗಳು ತಕರಾರು ಕೊಟ್ಟಾಗ ನಾವು ಪ್ರಕರಣವನ್ನು ವಾಪಸ್ಸು ಪಡೆದೆವು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

Sd/-

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.